# ಕಾಲು ಜಾರಿ ನದಿಗೆ ಬಿದ್ದು ಯುವಕ ಸಾವು; ಶವ ಪತ್ತೆ ಕಾರ್ಯಾಚರಣೆಯಲ್ಲಿ ತೊಡಗಿಕೊಂಡ ಸ್ವಯಂಸೇವಕರು.



ಬೈಂದೂರು ತಾಲ್ಲೂಕಿನ ಗಂಗೊಳ್ಳಿ  ಬಂದರು ವ್ಯಾಪ್ತಿಯಲ್ಲಿ ಕೆಲಸಕ್ಕೆಂದು ಬಂದಿದ್ದ ಬೋಟ್ ನ ಕೂಲಿ ಕಾರ್ಮಿಕ ಸಂತೋಷ್ ಎನ್ನುವ ಯುವಕ ಅಕಸ್ಮಾತ್ ಕಾಲು ಜಾರಿ ನದಿಗೆ ಬಿದ್ದು ಮೃತಪಟ್ಟ ಘಟನೆ ನಡೆದಿದೆ.

ದಿನಾಂಕ 19.01.2026 ಸುಮಾರು ಬೆಳಗ್ಗೆ 5:00 ಸಮಯದಲ್ಲಿ ಈ ಘಟನೆ ನಡೆದಿದ್ದು ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸದ್ಯಸರಾದ ದಿನೇಶ್ ಕಾರ್ವಿ,ಪ್ರಶಾಂತ್ ಕಾರ್ವಿ, ವಿವೇಕ್ ಬಿ, ವಿಶ್ವನಾಥ್ ಗಂಗೊಳ್ಳಿ ಇವರು ಬೋಟ್ ನ ಕೆಲಸಗಾರರ ಜೊತೆಗೆ

ಸೇರಿಕೊಂಡು ಮೃತ ವ್ಯಕ್ತಿಯ ಶವ ಪತ್ತೆ ಕಾರ್ಯಾಚರಣೆ ನಡೆಸಿರುತ್ತಾರೆ.

ಎರಡು ದಿನದ ನಂತರ ತಲ್ಲೂರು ಹೇರಿ ಕುದ್ರು ಸೇತುವೆ ಬಳಿ ಮೃತ ದೇಹ ಪತ್ತೆಯಾಗಿದ್ದು ಕುಟುಂಬದ ಸದಸ್ಯರಿಗೆ ಒಪ್ಪಿಸಿರುತ್ತಾರೆ. ಹಿಂದೂ ಜಾಗರಣ ವೇದಿಕೆ ಅಂಬುಲೆನ್ಸ್ ಚಾಲಕ ರಾದಾ ಸಚಿನ್ ಖಾರ್ವಿ ಇವರು ಅಂಬುಲೆನ್ಸ್ ಸಹಕಾರ ನೀಡಿರುತ್ತಾರೆ.



ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾದ ದಿನೇಶ್ ಕಾರ್ವಿ, ಪ್ರಶಾಂತ್ ಕಾರ್ವಿ, ವಿವೇಕ್ ಬಿ, ವಿಶ್ವನಾಥ್ ಗಂಗೊಳ್ಳಿ ಇವರು ಸ್ವತಃ ಈಜು ಪರಿಣಿತರಾಗಿದ್ದು ಮುಳುಗಿ ಮೃತ ದೇಹವನ್ನು ಹುಡುಕಿ ತರುವ ತಜ್ಞತೆಯನ್ನೂ ಹೊಂದಿರುತ್ತಾರೆ.